doc-116
T-P-2

SATYAVADI Founded 1917 Regd. No. M 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 29 ಸಂಚಿಕೆ 180] ಶುಕ್ರವಾರ 5—4—46 [ಬಿಡಿ ಪ್ರತಿ 3 ಪೈ

ಮಂತ್ರಿ ನಿಯೋಗದ ಆಗಮನ ನಮ್ಮನ್ನು ಮೋಸಪಡಿಸುವುದಕ್ಕಲ್ಲ

ನ್ಯೂ ಡೆಲ್ಲಿ, ಏ 3 — ಮಹಾತ್ಮ ಗಾಂಧೀಜೀಯವರು ಈ ಸಂಜೆ ಆಚರಿಸಿದ ಪ್ರಾರ್ಥನೆಯ ನೇಳೆಯಲ್ಲಿ ಸ್ಥಾನಿಕರಾರು ಮಂದಿ ನೆರೆದಿದ್ದರು. ಗಾಂಧೀಜೀ ಮಾತನಾಡತಾ "ಮಂತ್ರಿ ನಿಯೋಗವನ್ನು ನಂಬಿರುವುದು ಹೇಡಿತನ. ಸ್ವತಂತ್ರವಾಗಿಯೂ ಅವರು ಭಾರತಕ್ಕೆ ನಂಬಿಕೆಯಿಟ್ಟುಕೊಂಡು ಬಂದಿರುವರು. ಅದನ್ನು ನಾವು ನಂಬಬೇಕು. ಸಮ್ಮಿಶ್ರರಿಗೂ ದೇವರು ಜ್ಞಾನವನ್ನು ದಯಪಾಲಿಸಬೇಕು. ಈ ಮಹತ್ಕಾರ್ಯದಲ್ಲಿ ದೇವರು ಅನರೊಡನೆ ಇರಬೇಕು. ಅವರು ನಮ್ಮನ್ನು ಮೋಸ ಪಡಿಸಲು ಬಂದಿಲ್ಲ" ಎಂದರು.

.....

1951 ರಲ್ಲಿ ಲಂಡನ್ನಿನಲ್ಲಿ ಅಂತರರಾಷ್ಟ್ರೀಯ ಮಹಾ ಪ್ರದರ್ಶನ ನಡೆಸಲು ಬ್ರಿಟಿಷ್ ಸರಕಾರ ಒಪ್ಪಿದೆ.

ಲಂಡನ್, ಏ 4 — ಜಪಾನಿನಲ್ಲಿನ ಮುಂದಿನ ಪಾರ್ಲಿಮೆಂಟು ಚುನಾವಣೆಗೆ (ಬುಧ ಬುಧವಾರ) ಒಟ್ಟಿನ ಬೇಟಿ ಜೋರಾಗಿದೆ. ಉದ್ಯೋಗಾವಕಾಶ ಕಾಳಸಂತೆಯಲ್ಲಿ ಹೆಚ್ಚಳ, ಜೀಲೆ ಕೊಟ್ಟುಕೊಂಡ ಅಕ್ಕಿಯನ್ನು ಒಟ್ಟು ಪಡೆಯಲು ಕೊಡತ್ತಿರುವುದಾಗಿ ಹೇಳಲಾಗಿದೆ.

ಟೋಕ್ಯೋ ಏ 3 — ಪ್ರಪಂಚ ಸಮಸ್ಯೆಗಳು ಎನ್ಯಾಕ್ಕೆ ಮೆಕನ್ಸಿಕಿಂಗ್ ಮತ್ತೆ ಅವನ ಸ್ನೇತ ಅರ್ನೆಸ್ಟ್ ಬೇವಿನ್ನರಿಗಿಂತ ಹೆಚ್ಚಾಗಿ ಗೊತ್ತಿದೆಯೆಂದು ಸರ್ ಯಾ ವಿಲ್ಯಂ ಮಂತ್ರಿ ಮಾಸ್ಕೋವಿಗೆ ಹೋಗಿದ್ದಾಗ ಅತನ ಗೌರವಾರ್ಥವಾಗಿ ಕೊಟ್ಟ ಔತಣ ಕಾಲದಲ್ಲಿ ಮಾಲ್ಟಪರು ತಿಳಿಸಿದರೆಂದು ಹೇಳಲಾಗಿದೆ

ಯುರೋಪ್ಯ ಭಯೋತ್ಪಾತಕರು ಸ್ವಾಲಸ್ಪೃಸನಲ್ಲಿನ ರೈಲ್ವೆ ಸ್ಟೇಷನ್ನೆಲ್ಲ ಕತ್ತರಿಸಿರುವರೆಂದೂ ನ್ಯಾಯ ವಿರೋಧ ಪ್ರವೇಶಕ್ಕೆ ಅಣಿ ಮಾಡಿಕೊಳ್ಳುತ್ತಿರುವರೆಂದೂ ಹೇಳಲಾಗಿದೆ

ಜೊಂಬಾಯಿನಿಂದ ಮದ್ರಾಸಿಗೆ ಹೊರಟಿದ್ದ ರೈಲಿಗೆ ಬೆಂಕಿ ಹತ್ತಿ ಮೇಲ್ತರಗತಿ ಗಾಡಿ ನಾಶವಾಯಿತೆಂದೂ ಒಬ್ಬರು ಸತ್ತರೆಂದೂ ತಿಳಿಯಬಂದಿದೆ.

ಸ್ಟಾಫರ್ಡ್ ಕ್ರಿಪ್ಸ್

ಭಾರತೀಯ ಗೌರ್ನರ್

ಕಟಕ್ ಏ 1 — ಸರ್ ಚಿರಂಜೀಲಾಲ್ ತ್ರಿವೇದಿಯವರು ಒರಿಸ್ಸಾ ಗೌರ್ನರು ಪದವಿಯನ್ನು ವಹಿಸಿಕೊಂಡರು. ಈ ಪದವಿಗೆ ಬಂದ ಭಾರತೀಯರಲ್ಲಿ ಲಾರ್ಡ್ ಸಿಂಹರ ನಂತರ ಇವರೇ ಮೊದಲನೆಯವರು.

ರೈಲ್ವೆ ಜನರಲ್ ಮ್ಯಾನೇಜರ್

ಮೈಸೂರು ಸ್ಟೇಟ್ ರೈಲ್ವೆ ಜನರಲ್ ಮ್ಯಾನೇಜರ್ ಶ್ರೀ ಹೆಚ್. ರಂಗನಾಥಾಚಾರ್ಯರವರು ರಜೆಯಿಂದ ಹಿಂತಿರುಗುವುದಕ್ಕೆ ಮುಂಚೆ ತಾ || 3 ರಲ್ಲಿ ಶ್ರೀ ಎಂ. ವೆಂಕಟೇಶ್ವರವರಿಗೆ ಛಾರ್ಜನ್ನು ವಹಿಸಿಕೊಟ್ಟರು.

ಸೆಕ್ಯೂರಿಟಿ ಕೌನ್ಸಿಲ್

ನ್ಯೂಯಾರ್ಕ್ ಏ 3— ಸೆಕ್ಯೂರಿಟಿ ಕೌನ್ಸಿಲ್ಲಿಗೆ ಇನ್ನೂ ರಷ್ಯಾ ಪ್ರತಿನಿಧಿ ಹಾಜರಾಗಿಲ್ಲ ರಷ್ಯಾ ಪ್ರಸ್ತಾಪಗಳಿಂದ ಒಂದು ಸತ್ಕಾಗಳೂ ಒದಗಲ್ಲುಯಿತು. ಪರ್ಷಿಯಾ ಸಮಸ್ಯೆಯನ್ನು ಮೇ 6 ರವರೆಗೆ ಮುಂದುಹಾಕಬಹುದು.

ದಿವಾನರು

ಬೆಂಗಳೂರು ಏ 4— ದಿವಾನರವರು ಕಲ್ಕತ್ತಾದಿಂದ ವಿಮಾನದಲ್ಲಿ ಬಂದರು. ಭಾರತದ ಆಹಾರ ನಿಯೋಗವು ಲಂಡನ್ ವಾಷಿಂಗ್ಟನ್ನುಗಳಿಗೆ ಹೋದುದು ಒಳ್ಳೇ ದಾಯಿತೆಂದೂ, ತಾವು ನಿರೀಕ್ಷಿಸಿದಷ್ಟು ಫಲ ದೊರೆಯದಿದ್ದರೂ ಅಲ್ಲಿಯವರಿಗೆ ಭಾರತದ ಸ್ಥಿತಿ ತಿಳಿಯಲು ಅವಕಾಶವಾಯಿತೆಂದೂ ಹೇಳಿದರು. ಸಮಾಧಾನಿಂದ ಅಕ್ಕಿ ಬರುವ ನಿರೀಕ್ಷಣೆ ಇದೆಯೇನೂ ತಿಳಿಸಿರುವುದಾಗಿ ತಿಳಿಯುಬಂದಿದೆ.

ಅಲ್ಪ ಸಂಖ್ಯಾತರ ಸಮಸ್ಯೆ

ನವದೆಹಲಿ ಏ 1 — ಮಂತ್ರಿಮಂಡಲದೊಡನೆ ಇಂದು ನಡೆದ ರಾಜಕೀಯ ಚರ್ಚೆಯಲ್ಲಿ ಅಲ್ಪಸಂಖ್ಯಾತರ ಸ್ಥಿತಿ ವಿಷಯದಲ್ಲಿ ಲಾರ್ಡ್ ಲಿನ್‌ಲಿತ್ಗೋರವರು 1940 ನೇ ಆಗಸ್ಟ್‌ನಲ್ಲಿ ಭಾರತದ ಅಲ್ಪ ಸಂಖ್ಯಾತರಿಗೆ ಕೊಟ್ಟ ಭರವಸೆ ಏಚಾರವೇನು ಎಂದು ಕೇಳಲ್ಪಟ್ಟ ಪ್ರಶ್ನೆಗೆ ಕ್ರಿಪ್ಸರು 'ಮಿಕ್ಕೆಲ್ಲ ವಿಚಾರಗಳಂತೆ 6 ವರ್ಷಗಳಲ್ಲಿ ಅಲ್ಪ ಸಂಖ್ಯಾತರ ಭ್ರಾಸ ಮೂಸ ಅವರ ಪ್ರಭಾವ ಕೂಡ ವೈತ್ಯಾಸ ಹೊಂದಿರಬಹುದು. ಆದ್ದರಿಂದ ಹಿಂದೆ ಕೊಟ್ಟ ಹೇಳಿಕೆ ಈಗ ಅನ್ವಯಿಸದಿರಬಹುದು. ಹೊಸ ಅಧಿಕಾರದ ಮೇಲೆ ನಾವೀಗ ಚರ್ಚೆ ನಡೆಸುವೆವು. ಏಕ್ಸೋರಿಯಾ ಶಾಸನಮಂಡಲದಿಂದ ಇಲ್ಲೀವರೆಗೆ ಹೇಳಿಬಿಡುವುದಕ್ಕೆಲ್ಲಾ ಅರ್ಥ ಕೊಡುತ್ತ ಹೋದರೆ ದೇವರೇ ಗತಿ' ಎಂದು ಹೇಳಿದರು.

ಹರಿಜನರಿಗೆ ದೇವಾಲಯ ಪ್ರವೇಶ

ಶ್ರೀಮತಿ ಅನ್ನಪೂರ್ಣಮ್ಮ, ಎಂ.ಆರ್.ಎ.

(ಮುಂದುವರಿದ ದ್ದು)

ಅಸ್ಪೃಶ್ಯತೆಗೆ ಧರ್ಮದ ಆಧಾರವಿದೆಯೆ ಎಂದು ನಾವು ವೇದ, ಶಾಸ್ತ್ರ ಪುರಾಣಗಳನ್ನು ನೋಡುವುದಾದರೂ ಸರಿಯಾದ ಆಧಾರವು ನಮಗೆ ದೊರೆಯುವುದಿಲ್ಲ. ಅಸ್ಪೃಶ್ಯತೆಯು ಸಂಪ್ರದಾಯದಿಂದ ಬಂದಿದ್ದು. ಆದುದರಿಂದ ಇದಕ್ಕೆ ಶಾಸ್ತ್ರದಲ್ಲಾಗಲೀ, ಧರ್ಮದಲ್ಲಾಗಲೀ ಪ್ರಮಾಣವಿಲ್ಲ. ವೇದದಲ್ಲಿ ಚತುರ್ವರ್ಣಗಳಿವೆ ಆದುದರಿಂದ ಹರಿಜನರೂ ಕೂಡ ಈ ಚತುರ್ವರ್ಣಗಳಲ್ಲಿ ಒಂದಕ್ಕೆ ಸೇರಿದವರು. ಅಂದರೆ ಹರಿಜನರು ನಮ್ಮ ಹಾಗೆ ಮನುಷ್ಯರು. ಅವರನ್ನು ಈಗಿರುವ ಹೀನೋಪಾಧಿಗೆ ತಂದವರು ಸಮಾಜದವರೆಂದು ತಿಳಿದ ಹಾಗಾಯಿತು. ಅಂದರೆ ಅಸ್ಪೃಶ್ಯರು ಅಪವಿತ್ರರಲ್ಲ ಪವಿತ್ರರು ಎಂದ ಹಾಗಾಯಿತು.

ಬಹಳ ಅನಾದಿಕಾಲದಿಂದಲೂ ಉತ್ತಮ ಕುಲ ಅಥವಾ ವರ್ಣಗಳೊಡನೆ ಅಸ್ಪೃಶ್ಯರಿಗೆ ಸಮಾನ ಸ್ಥಾನವಿತ್ತೆಂದು ಪುರಾಣಗಳು ಸಾರುತ್ತಿವೆ. ಉದಾ— ಯುಧಿಷ್ಠಿರನ ಅರಮನೆಯಲ್ಲಿ ಎಲ್ಲ ವರ್ಣಗಳವರೂ ಇದ್ದುದು.

ಅಸ್ಪೃಶ್ಯರು ದೇವಾಲಯ ಪ್ರವೇಶಕ್ಕೆ ಅರ್ಹರೇ ಅಥವಾ ಅನರ್ಹರೇ ಎಂದು ನಾವು ನೋಡುವುದಾದರೂ ಅವರು ಅರ್ಹರು ಯಾತಕ್ಕೆಂದರೆ ಶಿವಪುರಾಣಗಳಲ್ಲಿಯೂ ಇತರ ಪುರಾಣಗಳಲ್ಲಿಯೂ ಹರಿಜನರು ಯಾವ ದೇವಸ್ಥಾನದಲ್ಲಿಯಾಗಲೀ, ಯಾವ ಯಾತ್ರಾಸ್ಥಳಗಳಲ್ಲಿಯಾಗಲೀ ಹೋಗಿ ಪೂಜೆವಾಡಿಸಬಹುದೆಂದು ಸಾರಿವೆ— ಇದೆಲ್ಲದೆ ಮೇಲಾಗಿ ನಮ್ಮಂತೆ ಹಿಂದಗಳು, ನಮ್ಮ ದೇವರುಗಳೇ ಅವರ ದೇವರುಗಳು. ಇದು ಬೇಷ. ಅವರು ನಮ್ಮಂತೆ ಮಾನವರು. ಮೃಗಗಳಲ್ಲಿ ಈ ದೃಷ್ಟಿಯಿಂದ ಲಾದರೂ ನಾವು ಅವರನ್ನು ಅಸ್ಪೃಶ್ಯತೆಯಿಂದ ದೂರತಳ್ಳುವುದು ಬೇಡ. ಮುಂದುವರಿಯಲು ಇತರರಿಗಿರುವಂತೆ ಇವರಿಗೂ ಪದವಕಾಶಗಳೆಲ್ಲ ವನ್ನೂ ದೊರಕಿಸಿಕೊಡುವುದಲ್ಲದೆ ನಮ್ಮ ಸಮಾಜದಲ್ಲಿ ಅವರಿಗೆ ಸಂಸವಾನದ ಸ್ಥಾನಮಾನಗಳನ್ನು ದೇವಾಲಯ ಪ್ರವೇಶದ ಹಕ್ಕು ದಯಪಾಲಿಸುವುದರ ಮುಖಾಂತರ ಕೊಡಬೇಕು.

ಇದಿಲ್ಲದಿದ್ದರೆ ನಾವು ನಾಗರೀಕರ ಬದಲು ಅನಾಗರೀಕರೆನ್ನಿಸಿಕೊಳ್ಳುವು ದರಲ್ಲಿ ಸಂದೇಹವಿಲ್ಲ. ನನಗೆ ಸಂಕು ಚಿತ ಭಾವನೆ ಬೇಡ, ವಿಶಾಲ ಭಾವನೆ ಬೇಕು.—ನಾವು ಕೇವಲ ಹಂಬಿನರನ್ನು ದೇವಾಲಯಕ್ಕೆ ಪ್ರವೇಶ ಮಾಡುವಂತೆ ಮಾಡ ವುದಲ್ಲದೆ ಅವರಲ್ಲಿ ಕೆಲವು ಉ ತ್ತಮ ಅಭ್ಯಾಸಗಳನ್ನು ಮಾಡಿಸಬೇ ಕು. ಸೈವರ್ಯ ಮದ್ಯಪಾನ ನಿರೋ ಧ ರೋಗರುಜಿನಗಳ ಉಚಿತ ಚಿಕಿತ್ಸೆಯ ಸೌಕರ್ಯ, ಬಡತನ ನಿರ್ಮೂಲನ ಮ ತ್ತು ಅವರಲ್ಲಿರುವ ಅ ಜ್ಞಾ ನವ ನ್ನು ಹೋಗಲಾಡಿಸಲು ಬೇಕಾದ ಜ್ಞಾ ನ ಪ್ರ ಚಾರ—ಇವುಗಳನ್ನು ಸರ್ಕಾರವು ಸಮೂ ಜವು ಈ ಹಿಂದಳಿದಿರುವ ನಮ್ಮ ಸ ಹೋದರರಿಗೆ ನಾವು ಕಲ್ಪಿಸಿಕೊಡಬೇ ಕು.* ಇವುಗಳಿಗೆ ಮೊದಲಾಗಿ, ಮೇ ಲ್ಪಂಕ್ತಿಯಾಗಿ ದೇವಾಲಯ ಪ್ರವೇಶದ ಹಕ್ಕನ್ನು ದಯಪಾಲಿಸಬೇಕು. ಆಗ ಲೇ ನಾವು ಅಂದರೆ ಭಾರತೀಯರು ದ ಕ್ಷಿಣ ಆಫ್ರಿಕದ ಭಾರತೀಯರಿಗೆ ಸರಿ ಯಾದ ಸ್ಥಾನಪನ್ನು ಅಲ್ಲಿನ ಬಿಳಿಯರು ಕೂಟ್ಟಲ್ಲವೆಂದು ಹೇಳಿಕೊಡಲು ಒತ್ತಾ ಯಮಾಡಲು ಯೋಗ್ಯರಾಗುವುದಲ್ಲದೆ, ದಾಸ್ಯ ಸಂಕೋಲೆಯನ್ನು ಬಿಡಿಸಲು ಶಕ್ತರಾಗುತ್ತೇವೆ.

ಇದಲ್ಲದೆ ನಮ್ಮ ಭರತ ಭೂಮಿಯ ಧರ್ಮ ಸಹಿಷ್ಣುತೆ, ನಾಗರೀಕತೆಯ ಪ್ರಸಂಜ ಇತರೆ ಭಾಗಗಳಲ್ಲಿ ಮಾದರಿ ಯಾಗುವುದು ಅದರಲ್ಲಿಯೂ ನಮ್ಮ ನಾ ಡಾದ ವೈಸೂರು ದೇಶಕ್ಕೆ ಆಗಲೇ ಮಾದರಿಯು ವೈಸೂರೆಂದು ಕೀರ್ತಿ ಬಂ ದು ಇತರ ನಾಗರೀಕ ನಾಡುಗಳೊಡ ನೆ ತಲೆಯೆತ್ತಿ ನಿಲ್ಲಲು ಯೋಗ್ಯತೆ ಬ ರುವುದು.

ಚಿನ್ನಾ ಬೆಳ್ಳಿ ಧಾರಣೆ

ಸವರನ್ 1 ಕ್ಕೆ	ರೂ. 66-12-0
ಚಿನ್ನ ತೊಲ 1 ಕ್ಕೆ	99-0-0
ಬೆಳ್ಳಿ	1-10-3

ಸಕಲರಿಗೂ
ಹೊಸವರ್ಷದ ಶುಭಾಶಯಗಳು

ಮೆಜಿಸ್ಟಿಕ್ ಹೊಟೇಲ್
ಚಾಮರಾಜ ರೋಡ್, ಮೈಸೂರು.

ಅಕ್ಕರ
ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವ ವರೆಗೂ ಊಟಕ್ಕೆ ಕೂಡ ಏಳಲು ಮನ ಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇ ಜು 1 ಆಣೆ. ಮುಂಗಡ ಕಳುಹಿಸಬೇಕು.
ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು
— ಶುಭ್ರಮಾಡುವ ಸಾಧನ —.
ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಅದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ;
ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ;
ಅದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು
ಸಾಬೂನು
ಕೊಳಕು ಬಟ್ಟೆಗಳನ್ನು
ಸ್ವಚ್ಛಗೊಳಿಸುವುದು
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.

ಅಲ್ಪ ವ್ಯಯದ ಕಾಯಕಲ್ಪ
ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ
ಶಕ್ತಿಸುಧಾ
ಬೆಲೆ ಒಂದಬ್ಬಿಗೆ ೧ ಕ್ಕೆ ರೂ. ೧.೮-೦
ವಿಳಾಸ— ಶಕ್ತಿಸುಧಾ, ೧೦೬೭ ಚಾಮರಾಜಪುರಂ, ಮೈಸೂರು

At Ranjit From 31-3-46
RAJPUTANI
Ranjit's 101 st Picture
ಜಯರಾಜ್ — ವೀಣಾ — ಬಿರ್ಬಿಗುಪ್ತ — ಗುಲಾಂಮಹಮದ್
— ಪಾತ್ರವಹಿಸಿರುವ —
ರಾಜಪುತಾನಿ

At Opera
4 ನೇ ವಾರ
ಮೆಹತಾಬ್ — ಸುರೇಂದ್ರ
ಪಾತ್ರವಹಿಸಿರುವ
.... ವಿಶ್ವಾಸ್....
ಮುಂದಿನ ವಿನೋದ—
ಹೊಸ್ನಪ್ಪ ಭಾಗವತರ್ ಟಿ. ಆರ್.
ರಾಜಕುಮಾರಿ ವಸಂತ ಕೋಕಿಲಂ
ಬಾಲಯ್ಯ ಕಾಳಿ ಎಣ್ ರತ್ನಂ
ಪಾತ್ರ ವಹಿಸಿರುವ
— ವಾಲ್ಮೀಕಿ —
(ತಮಿಳು)

Get Medical Diplomas
At home :— Ayurvedic Homeopathic, Unani, etc., Prospectus Free.
Old Indian Medical College
Kotgarh, Simla

ಹಸಿ ಬಿಟ್ಟದಪುರದ
ಹೊಗೆಸೊಪ್ಪಿನಿಂದ ತಯಾರಾದ
— ಉಂಡೇ ನಶ್ಯ —
ಇಲ್ಲಿ ದೊರೆಯುತ್ತೆ
ರಾವಂದೂರ್ ವೀರಶೆಟ್ಟಿ & ಸನ್ಸ್
ಶಿವರಾಂಪೇಟೆ ಮೈಸೂರು.

Edited, Printed and published by M. S. Krishna Rao, at the Satvavadi Press, Chamareja Agrahar, Mysore

For Good Printing
L. N. Press
Sriramp et MYSORE